<u>ದಿನಾಂಕಃ **07.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ದಿ. 05.05.2021 ರಂದು ನಾನು ಮತ್ತು ಸಿಬ್ಬಂದಿಗಳಾದ ಚಾಸಾ 2 ರಿಂದ 6 ನಗರದಲ್ಲಿ ಗಸ್ತು ಮಾಡುತ್ತಿರುವಾಗ ಬಾತ್ಮಿದಾರರಿಂದ ಬಂದ ಮಾಹಿತಿಯ ಮೇರೆಗೆ ಕಿರುಗೂರು ಮತ್ತು ಪೊನ್ನಂಪೇಟೆ ರಸ್ತೆಯಲ್ಲಿ ಕಾಯುತ್ತಿರುವಾಗ ಬೆ. 06.15 ಕ್ಕೆ ಪಿಕಪ್ ವಾಹನ ಕೆ.ಎ.18.ಬಿ.3184 ಬರುತ್ತಿರುವುದನ್ನು ನಾವು ತಡೆದು ಅದನ್ನು ಪರಿಶೀಲಿಸಿದಾಗ ಪಂಚರಾದ ಚಾಸಾ 9 ಮತ್ತು 10 ರವರ ಸಮಕ್ಷಮ ಪರಿಶೀಲಿಸಿದಾಗ ಒಂದು ಬಿಳಿ ಮತ್ತು ಕಪ್ಪು ಪಟ್ಟೆಇರುವ ಎತ್ತು, ಒಂದು ಕಪ್ಪು ಬಣ್ಣದ ಎತ್ತು, ಒಂದು ಹೆಣ್ಣು ಕರು ಅಮಾನತು ಮಹಜರ್ ಕ್ರಮ ಜರುಗಿಸಿ ಸದರಿ ಮಹಜರ್ ಅನ್ನು ಬೆ 06.30 ರಿಂದ 07.30 ತನಕ ಬರೆಯಲಾಯಿತು. ನಂತರ ವಶಪಡಿಸಿಕೊಂಡ ಸ್ವತ್ತನ್ನು ಮತ್ತು ಮಾಲನ್ನು ಮಾಲು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು.

ಮಹಜರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ. ಪಿ.1 ಎಂದು, ಸಹಿಯನ್ನು ನಿ. ಪಿ. 1(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ. ಪಿ. 2 ರಿಂದ 7 ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಸ್ವತ್ತನ್ನು ಮಾಲು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು. 2 ಎತ್ತು ಮತ್ತು ಒಂದು ಕರುವನ್ನು ಮೈಸೂರಿನ ಪಿಂಜರಾ ಪೋಲ್ ಗೆ ಕಳುಹಿಸಲಾಯಿತು. ವಶಪಡಿಸಿಕೊಂಡ ಕಪ್ಪು ಬಣ್ಣದ ಟಾರ್ಪಲ್ ಮತ್ತು ನೈಲಾನ್ ಹಗ್ಗವನ್ನು ವಶಪಡಿಸಿಕೊಂಡು ಸ್ವತ್ತನ್ನು ಮಾಲು ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು.

ನಿ. ಪಿ. 4 ರಿಂದ 6 ಸ್ವತ್ತನ್ನು ಮಾನ್ಯ Assistance commissioner ರವರಿಗೆ ಹತ್ತಾಂತರಿಸಲು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು. ಸಾಕ್ಷಿದಾರರಾದ ಚಾಸಾ 2 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಪಶುವೈದ್ಯಾಧಿಕಾರಿಗಳ ಎತ್ತು ಮತ್ತು ಕರುವಿನ ಬಗ್ಗೆ ವಯಸ್ಸಿನ ಅಂದಾಜುಗಳ ಮೊತ್ತದ ಬಗ್ಗೆ ಮಾಹಿತಿ ನೀಡುವಂತೆ ಮನವಿ ಪತ್ರ ನೀಡಲಾಯಿತು ದಿ. 09.06.2021 ರಂದು 1 ಮತ್ತು 2 ನೇ ಆರೋಪಿತರು ನಿರೀಕ್ಷಣಾ ಜಾಮೀನು ಪಡೆದುದಸ್ತಗಿರಿ ಕ್ರಮ ಜರುಗಿಸಿ ಬಿಡಲಾಯಿತು. ದಿ. 18.06.2021 ರಂದು ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 8 ಎಂದು, ಸಹಿಯನ್ನು ನಿ. ಪಿ. 8 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ವೀಕೃತಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ. 9 ಎಂದು, ಸಹಿಯನ್ನು ನಿ. ಪಿ. 9 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ವೈದ್ಯಕೀಯ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 10 ಎಂದು, ಸಹಿಯನ್ನು ನಿ. ಪಿ. 10 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 11 ಎಂದು, ಸಹಿಯನ್ನು ನಿ. ಪಿ. 11 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ. ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ. ಪಿ. 12 ಎಂದು, ಸಹಿಯನ್ನು ನಿ. ಪಿ. 12 (ಎ) ಎಂದು ಗುರುತಿಸಲಾಯಿತು. ಟಾರ್ಪಲ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು. ಮಾ 1 ಎಂದು, ನೈಲಾನ್ ಹಗ್ಗವನ್ನು ಮು. ಮಾ 2 ಎಂದು ಗುರುತಿಸಲಾಯಿತು. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಪಿ. ಹೆಚ್ ಆರ್ ವಕೀಲರಿಂದಃ</u>

ಈ ಪ್ರಕರಣದಲ್ಲಿ ನಾನೇ ದುರು ಕೊಟ್ಟಿದ್ದು ನಾನೇ ತನಿಖೆ ಮಾಡಿರುತ್ತೇನೆ ಎಂದರ ಸರಿ. ಮಾಹಿತಿ ಬಂದ ಕೂಡಲೇ ಪ್ರ.ವ.ವರದಿಯನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮಾಹಿತಿ ಬಂದ ಸ್ಥಳದಿಂದ ಕೃತ್ಯ ಸ್ಥಳವು 8 ಕಿ. ಮೀ. ದೂರ. ಸ್ಥಳಕ್ಕೆ ಹೋದಾಗ ಗಾಡಿಯಲ್ಲಿ ಇದ್ದ ಆರೋಪಿಗಳು ಓಡಿ ಹೋಗಿರುತ್ತಾರೆ. ಸ್ಥಳದಲಿ ಸಾರ್ವಜನಿಕರು ಇರಲಿಲ್ಲ. ಸ್ಥಳದಲ್ಲಿ ಯಾವುದೇ ಸಾರ್ವಜನಿಕರ ಮುಂಗಟ್ಟು ಇಲ್ಲ. ಬೆಳಗಿನ ಜಾವ ಆದ್ದರಿಂದ ಬೆಳಕು ಸಾಕಷ್ಟು ಇರಲಿಲ್ಲ ಎಂದರೆ ಸರಿ. ಎತ್ತುಗಳನ್ನು ಗುರುತಿಸಲು ಫೋಟೋ ನೋಡಿದರೆ ಗುರುತಿಸಬಹುದು ಹಾಗೆಯೇ ಬಣ್ಣದ ಮೂಲಕ ಗುರುತು ಹೇಳಲು ಬರುವುದಿಲ್ಲ, ಫೋಟೋಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಚಾಸಾ 10 ಈ ಎತ್ತುಗಳ ಮಾಲೀಕರು, ಅವರನ್ನು ನಾನು ವಿಚಾರಿಸಿರುತ್ತೇನೆ. ಆರೋಪಿಗಳು ಹಿಡಿಯಲು ಸಿಕ್ಕಿರುವುದಿಲ್ಲ. ನಾನು ಹೇಳಿದಂತೆ ಯಾವುದೇ ಎತ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ, ಸ್ಥಳದಲ್ಲಿ ಮಹಜರ್ ಮಾಡಿಲ್ಲ, ಸುಳ್ಳು ಪ್ರಕರಣ ದಾಖಲಿದ್ದೇನೆ ಎಂದರೆ ಸರಿಯಲ್ಲ. ಮು. ಮಾ 2 ಹಗ್ಗ ಒಂದೇ ಇದ್ದು ಈ ಒಂದೇ ಹಗ್ಗದಿಂದ ಹೇಳಿರುವ ಎತ್ತುಗಳನ್ನು ಕಟ್ಟಲು ಸಾಧ್ಯವಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಸಾಕ್ಷಿದಾರರ ಹೇಳಿಕೆ ಪಡೆಯಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/xxx-
ಸಿವಿಲ್ ನ್ಯಾಯಾಧೀಶರು, ಪೊನ್ನಂಪೇಟೆ.